ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 156-160
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಆರ್ಥಿಕ ಹಿನ್ನೆಲೆಯಲ್ಲಿ ಹೊನ್ನಾಳಿ ತಾಲೂಕಿನ ಕೆರೆಗಳು

**ತಿಪ್ಪೇಶ ಎಸ್ ಮತ್ತು ಡಾ. ಆರ್. ರಾಜಣ್ಣ**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*ಯಾವುದೇ ಒಂದು ಪ್ರದೇಶದ ಅಭಿವೃದ್ಧಿಯು ಅಲ್ಲಿನ ಆರ್ಥಿಕತೆಯನ್ನು ಅವಲಂಬಿಸಿರುತ್ತದೆ. ಭಾರತದ ಗ್ರಾಮೀಣ ಆರ್ಥಿಕತೆ ಪ್ರಮುಖವಾಗಿ ವ್ಯವಸಾಯವನ್ನು ಅವಲಂಬಿಸಿದೆ. ವ್ಯವಸಾಯಕ್ಕೆ ನೀರಿನ ಅವಶ್ಯತೆ ಪ್ರಮುಖವಾಗಿರುತ್ತದೆ. ಆದಕಾರಣ ಹಿಂದೆ ಕೆರೆ ಬಾವಿಗಳನ್ನು ನಿರ್ಮಿಸುತ್ತಿದ್ದರು. ನಾಡಿನ ಅಭಿವೃದ್ಧಿಗೆ ನೀರಾವರಿ ವ್ಯವಸ್ಥೆ ಸಹ ಒಂದಾಗಿದೆ. ಆರ್ಥಿಕ ಬೆಳವಣಿಗೆಯ ಭಾಗವಾಗಿ ಕೃಷಿ ಸಂಬಂಧಿತ ನೀರಾವರಿ, ನೀರಾವರಿಗಾಗಿ ಪೂರಕವಾಗಿ ರಾಜ-ಮಹಾರಾಜರು, ಸಾಮಂತರು, ಪಾಳೆಯಗಾರರು, ಶ್ರೀಮಂತ ವರ್ಗದವರು ಕೆರೆಗಳನ್ನು ನಿರ್ಮಿಸುತ್ತಿದ್ದರು. ಪ್ರಸ್ತುತ ಅಧ್ಯಯನದಲ್ಲಿ ಹೊನ್ನಾಳಿ ತಾಲೂಕಿನ ಕೆರೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ಕರ್ನಾಟಕ ಇತಿಹಾಸ, ಹೊನ್ನಾಳಿ ತಾಲೂಕು, ಆರ್ಥಿಕ ಅಭಿವೃದ್ಧಿ, ಕೆರೆಗಳ ಪಾತ್ರ.*

## ಪೀಠಿಕೆ

ಪ್ರಾಗೈತಿಹಾಸಿಕ ಮಾನವ ತನ್ನ ವಾಸಕ್ಕಾಗಿ ಗುರುತಿಸಿಕೊಂಡ ಸ್ಥಳಗಳು ನೀರು ದೊರೆಯುವಂತಹ ನೈಸರ್ಗಿಕ ತಾಣಗಳೇ ಆಗಿದ್ದವು. ಕೃಷಿಯನ್ನು ತನ್ನ ಮುಖ್ಯ ಜೀವನಾಧಾರವಾಗಿ ಬಳಕೆಗೆ ತಂದ ದಿನದಿಂದಲೇ ಮಳೆಯ ಹಾಗೂ ನದಿಯ ನೀರನ್ನು ಸಾಕಷ್ಟು ಕಾಲ ಹಿಡಿದಿಟ್ಟುಕೊಳ್ಳುವ ಅವಶ್ಯಕತೆ ಇತ್ತೆಂದು ಪರಿಗಣಿಸಬಹುದಾಗಿದೆ. ಅಂದಿನ ಕಾಲಾದಲ್ಲಿಯೇ ನೀರನ್ನು ಸಂಗ್ರಹಿಸಿಕೊಳ್ಳುವ ತಮ್ಮಗಳ ಅಗತ್ಯಕ್ಕೆ ಪೂರಕವಾಗಿ ನಡೆಸಿರುವ ಪ್ರಯತ್ನಗಳು ಆಗಿವೆ. ಆದಕಾರಣ ಅಂದಿನ ಕಾಲಕ್ಕೆ ಕೆರೆ, ಕುಂಟೆ, ಕಟ್ಟೆಗಳಾಗಿ ತನ್ನ ದೇಹದ ಬೆಳವಣಿಗೆಯನ್ನು ಪಡೆದುಕೊಂಡವು. ಒಂದು ದೃಷ್ಟಿಯಲ್ಲಿ ನೀರಾವರಿ ಕಾಮಗಾರಿಗಳ ನಿರ್ಮಾಣದಲ್ಲಿ ಕೃಷಿಯೂ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಿದ್ದರೂ ಧಾರ್ಮಿಕ ಹಿನ್ನೆಲೆಯಲ್ಲಿಯೂ ಸಹ ತನ್ನದೇ ಆದ ಇತಿಹಾಸವನ್ನು ಸೃಷ್ಟಿಸಿಕೊಂಡಿವೆ.

ಕೌಟಿಲ್ಯನ ಅರ್ಥಶಾಸ್ತ್ರವೂ ಸಹ ಒಂದು ವಿಚಾರವನ್ನು ವ್ಯಕ್ತಪಡಿಸುತ್ತದೆ. ಅದೇನೆಂದರೆ ರಾಜನು ಜನಪದಗಳಲ್ಲಿ ಅಣೆಕಟ್ಟುಗಳನ್ನು ಕೆರೆಗಳನ್ನು ಕಟ್ಟಿಸಬೇಕೆಂದು ಕಟ್ಟಿಸಿದವರಿಗೆ ಹಣ ಉಪಕರಣಗಳನ್ನು ಕೊಟ್ಟು ಒಳ್ಳೆಯ ಕೆಲಸಕ್ಕೆ ಸಹಕರಿಸಬೇಕೆಂದು ತಿಳಿಸಿದ್ದಾರೆ.[1] ಆದಕಾರಣ ತಟಾಕಿಗಳನ್ನು ನಿರ್ಮಿಸಿ ನದೀ ಮಾತೃಕೆಯನ್ನಾಗಿ ಮಾಡಬೇಕು ಎಂಬ ನಿದರ್ಶನಗಳು ಸಹ ಸಾಕಷ್ಟು ಸಂಖ್ಯೆಯಲ್ಲಿ ಸಾಕಷ್ಟು ಮಾದರಿಯಲ್ಲಿ ಕಂಡುಬಂದಿವೆ. ಈ ಅಧಾರದ ಮೇಲೆ ಕರ್ನಾಟಕದ ಆಯಾ ಕಾಲಘಟ್ಟದಲ್ಲಿ ಉಗಮಗೊಂಡ ನೀರಾವರಿ ಚೌಕಟ್ಟನ್ನು ಸಮಕಾಲೀನ ಶಾಸನಗಳ ಆಧಾರದ

***Please cite this article as:*** ತಿಪ್ಪೇಶ ಎಸ್ ಮತ್ತು ಆರ್. ರಾಜಣ್ಣ. (2024). ಆರ್ಥಿಕ ಹಿನ್ನೆಲೆಯಲ್ಲಿ ಹೊನ್ನಾಳಿ ತಾಲೂಕಿನ ಕೆರೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(4), 156–160

ಮೇಲೆ ಗುರುತಿಸುವಂತಹ ಪ್ರಯತ್ನವನ್ನು ಮಾಡಲಾಗಿದೆ.

ಕರ್ನಾಟಕದ ಪ್ರಥಮ ರಾಜಮನೆತನವೆಂದರೆ, ಅದು ಬನವಾಸಿಯ ಕದಂಬರು. ಈ ಬನವಾಸಿಯ ಕದಂಬರು ಕರ್ನಾಟಕದ ಇತಿಹಾಸವನ್ನು ಸಂಸ್ಕೃತಿಯನ್ನು ಮತ್ತು ಪರಂಪರೆಯನ್ನು ಸೃಷ್ಟಿಸಿದೆ ಎಂದು ಹೇಳಬೇಕು. ಚಿತ್ರದುರ್ಗಜಿಲ್ಲೆಯ ಹತ್ತಿರಇರುವ ಚಂದ್ರವಳ್ಳಿಯಲ್ಲಿ ಮೊದಲನೆಯ ಕದಂಬ ರಾಜ್ಯದ ಮಯೂರ ಶರ್ಮಕೆರೆಯನ್ನು ಕಟ್ಟಿಸಿರುವುದಾಗಿ ದಾಖಲಿಸಿದೆ. ಕದಂಬರ ಕಾಕುತ್ಸವರ್ಮನ ತಾಳಗುಂದದ ಪ್ರಣವೇಶ್ವರ ದೇವಾಲಯದ ಎದುರಿಗೆ ಕೆರೆಯನ್ನು ನಿರ್ಮಿಸಿರುವ ಕುರಿತು ತಿಳಿದುಬಂದಿದೆ. ಅದೇ ಶಾಸನದಲ್ಲಿ ಶಾತವಾಹನರು ಪ್ರಾಣವೇಶ್ವರನನ್ನು ಪೂಜಿಸುತ್ತಿದ್ದರು ಎಂದು ಪ್ರಸ್ತಾಪಗೊಂಡಿರುವ ಹಿನ್ನೆಲೆಯಲ್ಲಿ ಶಾತವಾಹನ ಕಾಲಘಟ್ಟದ ವೇಳೆಗೆ ಇಲ್ಲಿ ಕೆರೆ ಇದು ಇದ್ದುದು ಸ್ಪಷ್ಟ. ಈ ಮೇಲಿನ ಎರಡು ಶಾಸನಗಳು ಕದಂಬರ ಆರಂಭಿಕ ಶಾಸನೋಕ್ತ ಕೆರೆಗಳಾಗಿದ್ದು, ಕರ್ನಾಟಕದಲ್ಲಿ ಕದಂಬ ಪೂರ್ವದಲ್ಲೇ ಕೆರೆಗಳು ಜಲಸಂಗ್ರಹ ಸ್ವರೂಪದ ಕಾರ್ಯವಿಧಾನಗಳು ಒಂದಾಗಿದ್ದವು.[2]

ಕೆರೆಗಳನ್ನು ನದಿ ಆಧಾರಿತ ಕೆರೆಗಳು ಮಳೆ ಆಧಾರಿತ ಕೆರೆಗಳು ಎಂದು ವಿಭಾಗಿಸಬಹುದು. ನದಿಗಳಿಗೆ ಅಡ್ಡಲಾಗಿ ಅಣೆಕಟ್ಟು ಹಾಕಿ ಹರಿವ ನೀರನ್ನು ತಡೆದು ಅಲ್ಲಿಂದ ಮುಂದೆ ಕೆರೆಗಳಿಗೆ ಹರಿಸುವರು. ಇಂತಹ ನೀರಾವರಿಯನ್ನು ನದಿ ಆಧಾರಿತ ಕೆರೆಗಳು ಎನ್ನುವರು. ಮಳೆ ಆಧಾರಿತ ಕೆರೆಗಳು ಒಂದಕ್ಕೊಂದು ಸಂಬಂಧ ಹೊಂದಿ ಅವುಗಳ ಜಲಸಂಚಯನ ಪ್ರದೇಶಗಳಿಂದ ಕಾಲುವೆಗಳ ಮೂಲಕ ನೀರು ಕೆರೆಗಳನ್ನು ಸೇರುವುದು. ಹೊನ್ನಾಳಿ ತಾಲೂಕಿನಲ್ಲಿ ಹಲವರು ಕೆರೆಗಳನ್ನು ಹೆಸರಿಸಬಹುದು. ಕೆರೆಯ ಆಂತರಿಕ ಅಗತ್ಯ ಹಾಗೂ ಅದಕ್ಕೆ ತಕ್ಕ ಭಾಗಗಳ ಬಗ್ಗೆ ಒಂದೊಂದೇ ಅಂಗಾಂಗವನ್ನು ಪರಿಶೀಲಿಸಬಹುದು.[3]

**ಹೊನ್ನಾಳಿ ತಾಲೂಕಿನ ಕೆರೆಗಳು**

ಹೊನ್ನಾಳಿ ತಾಲೂಕಿನಲ್ಲಿ ಅನೇಕ ಕೆರೆಗಳಿವೆ. ಅವುಗಳಲ್ಲಿ ಹುಣಸಘಟ್ಟದ ಚಿತ್ತಾಪುರಕೆರೆ, ಸುಬೇದಾರನಕೆರೆ, ಹೆಚ್.ಗೋಪಗೊಂಡನಹಳ್ಳಿಕೆರೆ, ಕತ್ತಿನಕೆರೆ, ಸೊರಟೂರುಕೆರೆ, ಅರಬಹಟ್ಟ, ಹೊಸಕೆರೆ, ಮುನ್ನಿರಕೆರೆ, ತಿಮಾಪುರಾಮನಕೆರೆ, ಹುಣಸೆಗಟ್ಟ ಹೊಸಕೆರೆ, ಹನಗವಾಡಿ ಲಿಂಗಾಪುರಕೆರೆ, ಹೊಸಳ್ಳಿ ಕೆರೆ, ಹೊಟ್ಯಾಪುರ– ಹೊಟ್ಯಾಕೆರೆ, ಕುಲಂಬಿ ದೊಡ್ಡಕೆರೆ, ಕುಂದೂರುದೊಡ್ಡಕೆರೆ, ರಾಮಪುರರಾಮೇಪುರಕೆರೆ, ಸದಾಶಿವಪುರ–ಬೀರಗೊಂಡನಹಳ್ಳಿ ಕೆರೆ (ಕಾಯಕಟ್ಟೆಕೆರೆ), ಒಡೆಯರ ಹತ್ತೂರುಕೆರೆ, ಬೇಲಿ ಮಲ್ಲೂರುಕೆರೆ, ಕುಂಬಳೂರು ಕೆರೆ, ಹೆಚ್.ಕಡದಕಟ್ಟೆಕೆರೆ, ಮುಕ್ತೇನಹಳ್ಳಿ ಕೆರೆ ಪ್ರಮುಖವಾದವುಗಳಾಗಿವೆ. ಈ ಕೆರೆಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಆರ್ಥಿಕಾಭಿವೃದ್ಧಿಗೆ ಪೂರಕವಾಗಿವೆ.[4]

ಜೀವಂ ಜೀವನಾಧಾರಂ ಎಂಬ ಸಂಸ್ಕೃತ ವಾಣಿಯೊಂದಿದೆ. ಸಂಸ್ಕೃತದಲ್ಲಿ ಜೀವನ ಎಂಬ ಪದಕ್ಕೆ ನೀರು ಎಂದರ್ಥ. ನೀರಿಲ್ಲದೆ ಜೀವನವಿಲ್ಲ. ಒಂದು ನಾಡಿನ ಸರ್ವತೋಮುಖ ಅವೃದ್ಧಿಯು ಆ ನಾಡಿನ ನೀರಾವರಿ ಸ್ಥಿತಿಯನ್ನು ಅವಲಂಬಿಸಿದೆ. ನಿಸರ್ಗದ ಮಹಾ ವರದಾನವೆನಿಸಿರುವ ನದಿಗಳ ಉಪಯುಕ್ತ ರೀತಿಯ ಬಳಕೆಯ ಬಗ್ಗೆ ಕೆರೆಗಳು ತುಂಬಾನೇ ಸಹಕರಿಸಿವೆ. ಪ್ರಾಚೀನ ಕಾಲದಿಂದಲೂ ಪ್ರಜ್ಞಾವಂತರು ಚಿಂತನೆ ನಡೆಸುತ್ತಾ ಬಂದಿದ್ದಾರೆ. ಕೃಷಿಕರ ಬದುಕಿಗೆ ಭರವಸೆ ಆಗಿರುವುದು ಪ್ರಮುಖವಾಗಿ ನೀರು. ನೀರು ಕೃಷಿಗೆ ಅಲ್ಲದೆ ಕೈಗಾರಿಕೆಗೂ ಸಹಕಾರಿಯಾಗಿದೆ.

ಕೆರೆಯ ನಿರ್ಮಾಣ ಊರಿನ ನಿರ್ಮಾಣಕ್ಕೆ ಹಾಕುವ ಬಾದ್ರ ತಳಹದಿ ಎನ್ನಬೇಕು. ಕೆರೆ, ಬಾವಿ, ಜಲಸಂಚಯವಿದ್ದ ಸ್ಥಳದ ಸುತ್ತ ಕುಟುಂಬಗಳು ತಳವೂರಿ ಗ್ರಾಮಗಳು ರೂಪುಗೊಂಡವು. ಜಲವಾಚಕಕ್ಕೆ ಸಂಬಂಧಪಟ್ಟಂತೆ ಶಾಸನಗಳಲ್ಲಿ ಅಂಬುಧಿ, ಆರ್, ಏರಿ, ಏರು, ಕಟ್ಟೆ, ಕಾಲುವೆ,

ಕುಂಟೆ, ಕೆರೆ, ಕೊಳ, ಕೋಡಿ, ಗುಂಡಿ, ತಟಾಕ, ತೀರ್ಥ, ತೊರೆ, ದಿಗ್ಗಿಗೆ ದೋಣಿ ಮತ್ತು ನೀರು ಬಾವಿ, ಬೆಂಜಿ, ಬೆಳ್ಳ ಮದವು (ಮಡ್) ಹಳ್ಳ, ಹೊಂಡ, ಹೊಳೆ, ವಜ್ರ ಸರೋವರ, ಸಮುದ್ರ, ಸಾಗರ ಮುಂತದ ಜಲವಾಚಕ ಪ್ರತ್ಯಯಗಳು ಬಳಕೆಯಲ್ಲಿವೆ. ಕೆರೆಯಂಕಟ್ಟಿಸುದೇವಾಗಾರಮಂ ಮಾಡು ಸಜ್ಜನರ ಪೊರೆ ಎಂದು ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಿದರೆ, ಅಂದಿನ ರಾಜರುಗಳು ಮುಂದೆ, ರಾಜನಾಗುವ ಹಸುಗೂಸುಗಳಿಗೆ ಹೇಳುತ್ತಿರುವ ಮಾತಿರಬಹುದು. ಅಂದರೆ ಅಂದಿನ ಅರಸರು, ಕೆರೆ, ಕಟ್ಟೆ, ಕೊಳ ಇವುಗಳ ನಿರ್ಮಾಣಕ್ಕೆ ಅತ್ಯಂತ ಆಧ್ಯತೆ ನೀಡಿದ್ದರು. ಆದ್ದುದರಿಂದ ರಾಜರು ಮಂತ್ರಿಗಳು ಸನ್ಯಾಸಿಗಳು ಕೆರೆಗಳನ್ನು ಕಟ್ಟಿಸಿರುವ ಸಾಕಷ್ಟು ನಿದರ್ಶನಗಳಿವೆ.[5]

**ಟ್ಯಾಂಕ್ ಬೆಡ್ (ನೀರು ಮುಳುಗಡೆ ಪ್ರವೇಶ)**

ಯಾವುದೆ ಒಂದು ಪ್ರದೇಶದಲ್ಲಿಯೂ ಹರಿಯುವ ನೀರನ್ನು ನಿಲ್ಲಿಸಲು ಬದುವನ್ನು ಕಟ್ಟೆಯಲ್ಲಿ ಕಟ್ಟಿದಾಗ ಬದುವಿನ ಒಳಬದಿಯಲ್ಲಿ ಕಟ್ಟೆಯ ಒಳಗಡೆ ನೀರು ನಿಲ್ಲುವುದು. ಇದನ್ನೇ ಟ್ಯಾಂಕ್‌ಬೆಡ್ ನೀರು ಮುಳುಗಡೆ ಪ್ರದೇಶ ಕೆರೆಯಂಗಳ ಎಂದು ಹೆಳುವರು.ಹೀಗೆ ಕೆರೆಯು ತುಂಬಿದಾಗ ಎಷ್ಟು ವಿಸ್ತೀರ್ಣದಲ್ಲಿ ನೀರು ಹರಡಿರುತ್ತದೆ ಅಷ್ಟೂ ಪ್ರದೇಶವನ್ನು ನೀರು ಮುಳುಗಡೆ ಪ್ರದೇಶವೆನ್ನುವರು.

**ಕಮಾಂಡ್ ಏರಿಯಾ**

ಕೆರೆಯ ನೀರು ಕಾಲುವೆ ವ್ಯವಸ್ಥೆಯಲ್ಲಿ ಹಾಗೂ ನದಿಯ ನೀರು ಕಾಲುವೆಗಳ ಮೂಲಕ ಎಲ್ಲಿಯವರೆಗೆ ಹರಿಯುವುದೋ ಅಲ್ಲಿಯವರೆಗೆ ಕಮಾಂಡ್ ಏರಿಯಾ ಎನ್ನುತ್ತಾರೆ. ನೀರು ವಿತರಣೆಯ ವೈಶಾಲ್ಯ ಎಂದೂ ಹೇಳಬಹುದು. ಇಂತಹ ಕಮಾಂಡ್ ಏರಿಯಾವನ್ನು ಹೊರತುಪಡಿಸಿ ಮಾನವ ಪ್ರಯತ್ನದಿಂದ ನೀರು ಪಡೆವಪ್ರದೇಶವನ್ನು ನೀರಾವರಿ ಕಮಾಂಡ್ ಏರಿಯಾ ಎನ್ನುತ್ತಾರೆ. ನೀರಾವರಿ ಆಗುವ ಪ್ರದೇಶವನ್ನು ಅಚ್ಚುಕಟ್ಟು ಆಯಕಟ್ಟು ಎಂದು ಕರೆಯುತ್ತಾರೆ.

**ಕೆರೆಯ ಬದು**

ಕೆರೆ ಜಲಾಶಯದ ರಿಸರ್ವ್‌ನ ಮುಖ್ಯ ಭಾಗವೆಂದರೆ ಅದರ ಬದುಕಟ್ಟೆ, ಏರಿ, ಅಣೆಕಟ್ಟೆ ಸಾಧಾರಣವಾಗಿ ಕೆರೆಗಳ ಬಹುಭಾಗದ ಅಣೆಕಟ್ಟು ಬದುವು ಮಣ್ಣಿನ ಬದುವಾಗಿರುವುದು. ಬದುವಿನ ತಳಪಾಯದಲ್ಲಿ ಹೆಚ್ಚು ಅಗಲವಾಗಿದ್ದ ಏರಿಯಾ ಮೇಲ್ಭಾಗದ ಅಗಲವು ಕಡಿಮೆಯಾಗಿರುತ್ತದೆ. ಬದುವಿನ ಒಳಭಾಗದಲ್ಲಿ ಎಂದರೆ ನೀರು ನಿಲ್ಲುವ ಕೆರೆಯ ಅಂಗಳದ ಕಡೆಯಲ್ಲಿ ಬದುವು ಕಲ್ಲಿನ ಕಟ್ಟಡವಾಗಿದ್ದು, ನೀರಿನ ಅಲೆಗಳ ಹೊಡೆತದಿಂದ ಬದುವಿನ ಮಣ್ಣುಕರಗಿ ಏರಿ ಶಿಥಿಲವಾಗುವುದನ್ನು ಕಲ್ಲಿನ ಈ ಗೋಡೆ ತಡೆದು ಬದುವನ್ನು ರಕ್ಷಿಸುವುದು. ಬದುವಿನ ಹೊರಭಾಗದಲ್ಲಿ (ನೀರು ನಿಲ್ಲದಕಡೆ) ಹುಲ್ಲು ಬೆಳೆಸುತ್ತಾರೆ. ಇದು ಕೆರೆಯ ಅಂದವನ್ನು ಹೆಚ್ಚಿಸುತ್ತದೆ.

**ಕಾಲುವೆ–ತೂಬು–ಕೋಡಿ**

ಜಲಾಶಯದ ಕೆರೆಯಲ್ಲಿ ಸಂಗ್ರಹಿತವಾದ ನೀರು ಮಣ್ಣಿನ ಕಾಲುವೆ ಚರಂಡಿ ವ್ಯವಸ್ಥೆಯಿಂದ ಅಚ್ಚುಕಟ್ಟು ಪ್ರದೇಶಕ್ಕೆ ಹರಿಯುತ್ತದೆ. ಕೆರೆಯ ಬದುವಿನಲ್ಲಿ ನಿರ್ಮಿಸುವ ತೂಬುಗಳಿಂದ ನೀರನ್ನು ಹೊರಗಡೆಯ ಕಾಲುವೆಗಳಿಗೆ ಹರಿಸಬಹುದು. ಹಿಂದೆ ಕೆರೆಯ ತೂಬಿನ ತೆರೆಯುವ ಹಾಗೂ ಮುಚ್ಚುವ ಕೆಲಸದಲ್ಲಿ ಮರದಗೂಟವನ್ನು ಬಳಸಲಾಗುತ್ತಿತ್ತು. ಈಗ ತೂಬಿನ ಕಬ್ಬಿಣದ ಬಾಗಿಲುಗಳನ್ನು ತಿರುಗಣಿಗಳ ಮೂಲಕ ತೆರೆದು ಮುಚ್ಚುವರು. ಕೆರೆಯ ಅಥವಾ ಜಲಾಶಯದ ನಿರ್ಮಾಣದ ಹಂತದಲ್ಲಿಯೇ ಅವರಲ್ಲಿ ಸಂಗ್ರಹವಾಗಬೇಕಾದ ಮಳೆ ನೀರಿನ ಪ್ರಮಾಣವನ್ನು ಖಚಿತಪಡಿಸಿಕೊಂಡು ಒಂದು ನಿರ್ದಿಷ್ಟ ಪ್ರಮಾಣದ ಜಲವನ್ನು ಹಿಡಿದಿಡಲು ನಿರ್ಮಿಸಲಾಗಿರುತ್ತದೆ. ಇದಕ್ಕಿಂತ ಹೆಚ್ಚಿನ ನೀರು ಇದರಲ್ಲಿ ಶೇಖರಣೆಯಾದಾಗ ಹೆಚ್ಚಿನ ನೀರು ಬದುವಿನ ಮೇಲೆ

ಹರಿದು ಬದುವುಕಿತ್ತು ಹೋಗುವ ಕೊಚ್ಚಿ ಹೋಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ವ್ಯವಸ್ಥೆಗೊಳಿಸಿದ ನೀರಿಗಿಂತ ಹೆಚ್ಚಿನ ನೀರು ಸಂಗ್ರಹವಾದಾಗ ಈ ಅಧಿಕ ಜಲವನ್ನು ಆಚೆಗೆ ಬಿಡಲುಕವಾಟ ಸದೃಶ್ಯವಾದ ದಾರಿಯನ್ನು ಏರ್ಪಡಿಸಬೇಕು. ಈ ಹೆಚ್ಚಿನ ನೀರು ಹರಿದು ಹೊರಕ್ಕೆ ಹೋಗುವ ಸ್ಥಳಕ್ಕೆ ಕೋಡಿ (ವೇಸ್ಟ್‌ವೈರ್) ಎಂದು ಕರೆಯುತ್ತಾರೆ. ಹೆಚ್ಚುವರಿ ನೀರು ಹೊರ ಬಂದು ನದಿಯ ಪಾತ್ರಾ ಕೆಳಗಿನ ಕೆರೆಯನ್ನು ಸೇರುತ್ತದೆ.

ಈ ಮೇಲಿನ ರೀತಿಯ ಕೆರೆಗಳನ್ನು ನಾವು ಹೊನ್ನಾಳಿಯಲ್ಲಿ ಗಮನಿಸಬಹುದಾಗಿದೆ. ಹೊನ್ನಾಳಿ ತಾಲೂಕಿನಲ್ಲಿರಾಜ–ಮಹಾರಾಜರು ನಿರ್ಮಿಸಿರುವ ಕೆರೆಗಳನ್ನು ಕಾಣಬಹುದು. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಪ್ರತಿ ಹಳ್ಳಿಯಲ್ಲಿಯೂ ಕೆರೆಯ ನಿರ್ವಹಣೆಯ ಕೆಲಸಕ್ಕೆ ಒಂದು ಕೆರೆ ಉಸ್ತುವಾರಿ ಸಮಿತಿ ಇರುತ್ತಿದ್ದಿತು. ಕೆರೆಗಳನ್ನು ಗ್ರಾಮಸ್ಥರು ತಮ್ಮದೇ ಆದ ಆಸ್ತಿ ಎಂದು ಭಾವಿಸಿದ್ದರು ಮತ್ತು ಅವುಗಳನ್ನು ಒಂದು ನಿಯಮಾವಳಿಯ ಪ್ರಕಾರ ನಿರ್ವಹಿಸುತ್ತಿದ್ದರು.

ಗ್ರಾಮದವರು ನೀರುಗಂಟಿಯ ನೆರವಿನಿಂದ ನೀರಿನ ವಿತರಣೆಕೆರೆಯ ವಹಿವಾಟುಗಳ ಆಡಳಿತ ನಡೆಸುತ್ತಿದ್ದರು. ಇಂತಹ ನೀರುಗಂಟಿಗೆ ಇನಾಮ್ ಜಮೀನಿನನ್ನು ಸರ್ಕಾರದವರು ನೀಡುತ್ತಿದ್ದರು. ಇದರೊಡನೆಯೇ ಅಚ್ಚುಕಟ್ಟಿನ ಭೂಮಿಗಳ ರೈತರು ಬೆಳೆದ ಫಸಲಿನಲ್ಲಿ ಕಾಳಿನ ರೂಪದಲ್ಲಿ ಸಂಭಾವನೆ ಸಲ್ಲಿಸುತ್ತಿದ್ದಿತು. ಹಳ್ಳಿಯ ಜನರು ತಮ್ಮಲ್ಲಿನ ಸಂಪನ್ಮೂಲಗಳಿಂದಲೇ ಕೆರೆಗಳನ್ನು ದುರಸ್ತಿ ಜೀರ್ಣೋದ್ಧಾರ ನೆರವೇರಿಸುತ್ತಿದ್ದರು. ಬೇಸಿಗೆಯ ಭಾನುವಾರ ಹಳ್ಳಿಗರು ಒಟ್ಟಿಗೆ ಸೇರಿ ಶ್ರಮದಾನದಿಂದ ಕೆರೆಗಳ ಉಸ್ತುವಾರಿ ದುರಸ್ತಿ ರಿಪೇರಿ ಮರಮುಟ್ಟು ಕಾಮಗಾರಿಗಳನ್ನು ನಡೆಸುತ್ತಿದ್ದರು. ಶಾನುಭೋಗ, ಪಟೇಲ, ನೀರಗಂಟಿ, ತೋಟಿ, ತಳವಾರ, ಪೂಜಾರಿ ಮತ್ತು ಇತರ ಸೇವಾಕರ್ತನ ಪಾತ್ರಗಳೂ ಕರ್ತವ್ಯಗಳೂ ಕಾರ್ಯ ಕ್ಷೇತ್ರಗಳೂ ಖಚಿತವಾದ ರೂಪುರೇಷೆ, ನಿಯಮ, ನಿಬಂಧನೆಗಳನ್ನು ಹೊಂದಿದ್ದವು.

ಸ್ವಾತಂತ್ರ್ಯಾ ನಂತರ ಈ ಪರಿಸ್ಥಿತಿಯು ಬಹುಪಾಲು ಪರಿವರ್ತನೆ ಆಗಿದೆ. 1965 ರಲ್ಲಿ ನೀರಾವರಿ ಕಾಯಿದೆಯು ಜಾರಿಗೆ ಬಂದಿದೆ. ಇದರ ಪ್ರಕಾರ ಕೆರೆಗಳ ನಿರ್ವಹಣೆ ಈ ಕಾಲುವೆಯಲ್ಲಿ ಸರ್ಕಾರದ ಜವಾಬ್ದಾರಿಗಳಲ್ಲಿ ಸೇರಿದವು. ಇಡೀ ರಾಜ್ಯಕ್ಕೆ ವಿಸ್ತರಿಸಲಾದ ಈ ಕಾಲುವೆಯಲ್ಲಿ ನೀರಾವರಿ ಕೆಲಸಗಳ ರಚನೆ ನಿರ್ವಹಣೆ, ನಿರ್ಮಾಣ, ವಿತರಣೆ, ತುರ್ತು ಪರಿಸ್ಥಿತಿಯಲ್ಲಿ ಕೂಲಿಯಾಳುಗಳನ್ನು ಪಡೆಯುವ ವಿಷಯಗಳಿವೆ.

ಕೆರೆಗಳ ಮಣ್ಣನ್ನು ಗೊಬ್ಬರವಾಗಿ ಬಳಸಲಾಗುತ್ತಿತ್ತು. ಮೊದಲಿಗೆ ಪ್ರತಿವರ್ಷ ಬೇಸಿಗೆಯಲ್ಲಿ ಹೂಳನ್ನು ತೆಗೆಯಲಾಗುತ್ತಿತ್ತು. ಹೀಗಾಗಿ ಹೂಳು ಮಣ್ಣು ಹೆಚ್ಚಿಗೆ ಸೇರಲು ಅವಕಾಶವಿರುತ್ತಿರಲಿಲ್ಲ. ಕೆರೆಗಳ ತಳಮಟ್ಟವೂ ಹೆಚ್ಚುತ್ತಿರಲಿಲ್ಲ. ಅವುಗಳ ಜಲಸಂಗ್ರಹ ಶಕ್ತಿ ಬಹು ವರ್ಷಗಳವರೆಗೆ ಒಂದೇ ಆಗಿರುತ್ತಿತ್ತು. ಇದರ ಫಲವಾಗಿ ರಾಜಮನೆತನದವರು ಖಾಸಗಿಯವರು ಶತಮಾನಗಳ ಹಿಂದೆ ನಿರ್ಮಿಸಿದ ಕೆರೆಗಳು ಇಂದಿಗೂ ಕೆಲಸಕ್ಕೆ ಬರುತ್ತಿವೆ. ಯಾವ ಉದ್ದೇಶಕ್ಕಾಗಿ ಕೆರೆಗಳ ನಿರ್ಮಾಣವಾಯಿತೋ ಆ ಉದ್ದೇಶ ಸಫಲವಾಗುತಿತ್ತು.

ಪ್ರಾಚೀನ ಕಾಲದಲ್ಲಿಯೇ ನೀರಾವರಿ ಕಾಮಗಾರಿಗಳ ನಿರ್ಮಾಣದಲ್ಲಿ ಅವುಗಳು ಕೃಷಿ ಆರ್ಥಿಕಾಭಿವೃದ್ಧಿಗೆ ಪೂರಕವಾಗಿದ್ದರೂ ಧಾರ್ಮಿಕ ಮಹೋನ್ನತಿಯ ಉದ್ದೇಶಗಳು ಪ್ರಧಾನವಾಗಿದ್ದವು. ಕೆರೆ–ಕಾಲುವೆಗಳನ್ನು ನಿರ್ಮಿಸುವುದು ಒಂದು ಧಾರ್ಮಿಕ ಕಾರ್ಯ. ಇಂತಹ ಕಾರ್ಯಗಳನ್ನು ಕೈಗೊಂಡ ವ್ಯಕ್ತಿ ಕುಟುಂಬ ಹಾಗೂ ಮುಖ್ಯಸ್ಥರು ಪುಣ್ಯಕ್ಕೆ ಅರ್ಹರಾಗುತ್ತಾರೆ ಎಂಬ ಗಾಢವಾದ ನಂಬಿಕೆ ಇತ್ತು.

ಕೌಟಿಲ್ಯನ ಅರ್ಥಶಾಸ್ತ್ರವು ಸಹ ರಾಜರು ಜನಪದಗಳಲ್ಲಿ ಅಣೆಕಟ್ಟನ್ನು ಕೆರೆಗಳನ್ನು ಕಟ್ಟಿಸಬೇಕೆಂದು ಕಟ್ಟಿಸಿದವರಿಗೆ ಹಣ ಉಪಕರಣಗಳನ್ನು ನೀಡಿ ಸಹಕರಿಸಬೇಕು ಎಂಬುದು ತಿಳಿದುಬರುತ್ತದೆ.[6]

ಕೆರೆಗಳು ಪ್ರಾಚೀನ ಕರ್ನಾಟಕ ನೀರಾವರಿ ಸಾಧನಗಳಲ್ಲಿ ಅತ್ಯಂತ ಪ್ರಮುಖವಾದುದು. ರಾಜರು, ಅಧಿಕಾರಿಗಳು, ಸಾಮಂತರು, ಸನ್ಯಾಸಿಗಳೂ ಸಹ ಕೆರೆಗಳನ್ನು ನಿರ್ಮಿಸಿರುವ ಉದಾಹರಣೆಗಳಿವೆ.[7]

ಒಟ್ಟಾರೆ ನೋಡುವುದಾದರೆ ಹಳ್ಳಿಗಳಿಂದ ಕೂಡಿದ ಭಾರತದೇಶದ ರೈತರ ಕೃಷಿಯು ಬಹುತೇಕ ಮಳೆಯನ್ನು ಆಧರಿಸಿದೆ. ಆದುದರಿಂದ ಮಳೆಯನ್ನೇ ಅವಲಂಬಿಸಿರುವ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕು ರೈತನು ಸಹ ಜಾತಕಪಕ್ಷಿಯಂತೆ ಆಕಾಶವನ್ನೇ ನೋಡುತ್ತಿರುವ ರೈತನ ಚಿಂತಾಜನಕ ಪರಿಸ್ಥಿತಿಯ ಸುಧಾರಣೆಗಾಗಿ ಸ್ವಾತಂತ್ರ್ಯ ಭಾರತದ ಪ್ರಪ್ರಥಮ ಪ್ರಧಾನಿಯಾದ ಜವಾಹರಲಾಲ್ ನೆಹರುರವರು ಬೃಹತ್ ಅಣೆಕಟ್ಟುಗಳನ್ನು ಕಟ್ಟುವ ಯೋಜನೆಯೊಂದನ್ನು ತಯಾರಿಸಿದ ದಾಖಲೆಗಳಿವೆ.

ಹೊನ್ನಾಳಿ ತಾಲೂಕು ತನ್ನದೇಯಾದ ಇತಿಹಾಸವನ್ನು ಹೊಂದಿದೆ. ರಾಜ–ಮಹಾರಾಜರುಗಳ ಆಳ್ವಿಕೆಯಲ್ಲಿ ಹೊನ್ನಾಳಿ ತಾಲೂಕು ವಲಯವು ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕವಾಗಿಯೂ ಅಭಿವೃದ್ಧಿ ಹೊಂದುವುದಕ್ಕೆ ಕೆರೆಗಳು ಹಾಗೂ ನೀರಾವರಿಗೆ ನೀಡಿರುವ ಆದ್ಯತೆಯೇ ಪ್ರಮುಖ ಕಾರಣ. ಕೆರೆಗಳು ಮೀನು ಸಾಕಾಣಿಕೆಗೆ ಸಹಕಾರಿಯಾಗಿದೆ. ಹೊನ್ನಾಳಿ ಕೆರೆಗಳಲ್ಲಿ ಮೀನುಗಳನ್ನು ಹಾಕಲಾಗುತ್ತದೆ. ವಿದ್ಯಾವಂತ ನಿರುದ್ಯೋಗಿಗಳಿಗೆ ಮೀನುಗಾರಿಕೆಯಲ್ಲಿ ತರಬೇತಿ ನೀಡಿ ಅದರ ಸದುಪಯೋಗವನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ಮೀನುಗಾರರ ಸಹಕಾರ ಸಂಘಗಳ ಅಭಿವೃದ್ಧಿಗಾಗಿ ಸಹಾಯ ಹಸ್ತ ನೀಡುತ್ತಿವೆ. ಇದರಿಂದ ಜೀವಿಸಲು ಮೀನುಗಾರರಿಗೆ ಅನುಕೂಲವಾಗುತ್ತಿದೆ. ಕೆರೆಗಳಿಂದ ನಾನಾ ರೀತಿಯ ಉಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.

**ಕೊನೆಟಿಪ್ಪಣಿಗಳು**

1. ಗೋಪಾಲ್, ಬಿ.ಆರ್. ಕ್ರಾಪ್ಸ್ ಆಫ್ ಕದಂಬ ಇನ್‌ಸ್ಕ್ರಿಪ್ಸ್‌ನ್ಸ್. ಸಂ. (I)
2. ಗೋಪಾಲ್, ಬಾ.ರಾ. ಬನವಾಸಿ ಕದಂಬರು.
3. ಕಪ್ರಹ್ಲಾದರಾವ್ ಕೆ. (2005). *ಕೆರೆಯಹಾರ.* ಕೋಲಾರ ಪತ್ರಿಕೆ ಪ್ರಕಾಶನ. ಪುಟ.5.
4. ಶೈಲಜಾ ಟಿ.ಎಸ್. (2019). *ದಾವಣಗೆರೆ ಇದು ನಮ್ಮಜಿಲ್ಲೆ (ಪರಿಷ್ಕೃತ ಆವೃತ್ತಿ).* 4ನೇ ಮುಖ್ಯರಸ್ತೆ, ಪಿ.ಜಿ.ಬಡಾವಣೆ, ದಾವಣಗೆರೆ ಪುಟ. 446.
5. ದೀಕ್ಷಿತ್ ಜಿ.ಎಸ್. (ಸಂ.). (2000). *ಕರ್ನಾಟಕದಲ್ಲಿ ಕೆರೆ ನೀರಾವರಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ಗೋಪಾಲ್, ಬಿ.ಆರ್. ಕ್ರಾಪ್ಸ್ ಆಫ್ ಕದಂಬ ಇನ್‌ಸ್ಕ್ರಿಪ್ಸ್‌ನ್ಸ್. ಸಂ. (I)
7. ಚಿದಾನಂದಮೂರ್ತಿ ಎಂ. (1960). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (ಕ್ರಿ.ಶ.450–1150).* ಸಪ್ನ ಬುಕ್‌ಹೌಸ್. ಪುಟ.407.